**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.54/2020**

ಪ್ರಾ.ಸಾ. 14

ಚಾ.ಸಾ. 17

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 08.04.2026**

| | |
|---|---|
| ಸಾಕ್ಷಿದಾರರ ಹೆಸರು | ರತ್ನಮ್ಮ |
| ಗಂಡನ ಹೆಸರು | ಬೋರಯ್ಯ |
| ವಯಸ್ಸು | 63 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕುಕ್ಕೂರುದೊಡ್ಡಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ಚಾಸಾ.1 ನನ್ನ ಮಗ. ನನಗೆ 06 ಜನ ಮಕ್ಕಳು ಮೃತ ರಾಕೇಶ ಆರನೇಯವ. ಅವನು ಹಣಕಾಸು ಸಂಸ್ಥೆಯ ರಿಕವರಿ ಕೆಲಸ ಮಾಡುತ್ತಾನೆ. ಅವನು ನಮ್ಮ ಜೊತೆ ವಾಸವಾಗಿದ್ದ. ರಾಕೇಶ ಈಗ ಬದುಕಿಲ್ಲ. 7 ವರ್ಷಗಳ ಹಿಂದೆ ಒಂದು ದಿನ ಆತ ರಾತ್ರಿ 9.00 ಗಂಟೆ ಸಮಯಕ್ಕೆ ನಮಗೆ ಊಟ ತಂದು ನೀಡಿ ಸಿಗರೇಟ್ ತರುವುದಾಗಿ ಹೇಳಿ ಇಂಡಿಕಾ ಕಾರಿನಲ್ಲಿ ಹೊರಗಡೆ ಹೋದ. ಆದರೆ ಅವನು ಎಷ್ಟು ಹೊತ್ತಾದರೂ ಮನೆಗೆ ಬರಲಿಲ್ಲ. ಸುಮಾರು 12.00 ಗಂಟೆಯವರೆಗೆ ಕಾದರೂ ಬಂದಿರಲಿಲ್ಲ. ಬೆಳಗ್ಗೆ 6.00 ಗಂಟೆಗೆ ನನ್ನ ಮೈದುನನ ಮಗ ನಾನು ತೋಟದ ವಾಸದ ಮನೆಯಲ್ಲಿರುವಾಗ ಬಂದು, ರಾಕೇಶನನ್ನು ಹೊಡೆದು ಹಾಕಿದ್ದಾರೆಂದು ಹೇಳಿದ. ನಾನು ತೋಟದ ಮನೆಯಿಂದ ಕುಕ್ಕೂರುದೊಡ್ಡಿಗೆ ಬಂದೆ. ಕುಕ್ಕೂರುದೊಡ್ಡಿಗೆ ಬಂದಾಗ ರಾಕೇಶನ ಶವವನ್ನು ಮಂಡ್ಯ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆಂದು ಚಾಸಾ.1 ಹೇಳಿದ. ನಾನು ವಿಷಯ ತಿಳಿದು ಮಂಡ್ಯ ಆಸ್ಪತ್ರೆಗೆ ಬಂದೆ.

ರಾಕೇಶನ ಶವವನ್ನು ಆಸ್ಪತ್ರೆಯಲ್ಲಿ ನೋಡಿದಾಗ ಆತನ ದೇಹದಲ್ಲಿ ಗಾಯಗಳು ಕಂಡು ಬಂದವು. ಪೊಲೀಸರು ಈ ಬಗ್ಗೆ ನನ್ನನ್ನು ವಿಚಾರಿಸಿ ಹೇಳಿಕೆ ದಾಖಲಿಸಿಕೊಂಡರು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಹೆಚ್ ಬಿ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ಆರೋಪಿಗಳ ಪರ ವಕೀಲರು ತಿಳಿಸಿರುತ್ತಾರೆ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.